## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 190 |
| ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 10.12.2024 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಕಲ್ಲು ಗಣಿಗಾರಿಕೆ ಅನುಮತಿ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>2023-24ನೇ ಸಾಲಿನಲ್ಲಿ ರಾಜ್ಯದಲ್ಲಿ ಅಮಲ್ಜಾರಿ ಮಾಡಲಾದ ಉಪಖನಿಜಗಳ ಪರವಾನಗಿ / ಗುತ್ತಿಗೆಗಳ ವಿವರ
<table>
<tr><th colspan="2">ನಿರ್ದಿಷ್ಟ</th><th colspan="2">ನಿರ್ದಿಷ್ಟವಲ್ಲದ</th></tr>
<tr><th>ಸಂಖ್ಯೆ</th><th>ವಿಸ್ತೀರ್ಣ (ಎಕರೆಗಳಲ್ಲಿ)</th><th>ಸಂಖ್ಯೆ</th><th>ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>74</td><td>305-07</td><td>320</td><td>1245-35</td></tr>
</table>
ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಕಲ್ಲು ಗಣಿಗಾರಿಕೆ ಆರಂಭಿಸಲು ಸುರಕ್ಷತಾ ವಲಯ ಎಂದು ನೀಡಲು ಇರುವ ಮಾನದಂಡಗಳೇನು; (ಮಾಹಿತಿ ನೀಡುವುದು)</td><td>• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 6(2) ರಂತೆ ಸಾರ್ವಜನಿಕ ರಚನೆಗಳಿಂದ ಸುರಕ್ಷಿತ ಅಂತರವನ್ನು ಕಾಯ್ದಿರಿಸಿ ಕೊಂಡು ಕಲ್ಲು ಗಣಿಗಾರಿಕೆ ನಿರ್ವಹಿಸುವ ಬಗ್ಗೆ ಉಲ್ಲೇಖವಿರುತ್ತದೆ.<br>• ಇದರನ್ವಯ ಉಪಖನಿಜಗಳ ಗಣಿ ಗುತ್ತಿಗೆಗಳಿಗೆ ಮಂಜೂರಾತಿ ನೀಡುವಾಗ ಸಾರ್ವಜನಿಕ ರಚನೆ ಗಳಿಂದ 50 ಮೀಟರ್ ಸುರಕ್ಷಿತ ಅಂತರವನ್ನು ಕಾಯ್ದಿರಿಸಿಕೊಳ್ಳಲಾಗುತ್ತದೆ.<br>• ನಿಯಂತ್ರಿತ ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸಲು 100 ಮೀಟರ್ ಹಾಗೂ ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸಲು 200 ಮೀಟರ್ ಅಂತರವನ್ನು ಸಾರ್ವಜನಿಕ ರಚನೆಗಳಿಂದ ಕಾಯ್ದಿರಿಸಿ ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗುತ್ತಿದೆ.</td></tr>
<tr><td>ಇ)</td><td>ಸುರಕ್ಷತಾ ವಲಯ ಅಲ್ಲದಿದ್ದರೂ ಕೆಲವು ಕಡೆ ಕಲ್ಲುಗಣಿಗಾರಿಕೆ ಅನಧಿಕೃತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿರುತ್ತದೆ.</td></tr>
</table>

| | | |
|---|---|---|
| ಈ) | ಬಂದಿದ್ದರೆ, ಅವುಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು) | • ಕೆಲವು ಸ್ಥಳಗಳಲ್ಲಿ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್ ಗಳನ್ನು ಪಡೆಯದೆ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ನಿರ್ವಹಿಸುತ್ತಿರುವ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, ಸದರಿ ಅನಧಿಕೃತ ಗಣಿಗಾರಿಕೆಯನ್ನು ನಿಯಂತ್ರಿಸಲು ಸರ್ಕಾರದಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>➢ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 21 ಎಂಎಂಎನ್ (2) 2014, ದಿನಾಂಕ 21.01.2014 ರಂತೆ, ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 21 ಮತ್ತು 22ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43 ಮತ್ತು 46ರಂತೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮವಹಿಸಲು, ಕಂದಾಯ, ಅರಣ್ಯ ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.<br><br>➢ ಅನಧಿಕೃತ ಕಲ್ಲು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ರಾಜ್ಯದಲ್ಲಿ ಆಯಕಟ್ಟಿನ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸುತ್ತಿದ್ದು, ಅನಧಿಕೃತ ಕಲ್ಲು ಗಣಿಗಾರಿಕೆ/ ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.<br><br>➢ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ರಾಜ್ಯದಲ್ಲಿ ಮಂಜೂರು ಮಾಡಿರುವ ಕಲ್ಲು ಗಣಿ ಗುತ್ತಿಗೆ ಪ್ರದೇಶಗಳನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಕೇಂದ್ರ (KSRSAC) ರವರಿಂದ ಡ್ರೋಣ್/ ಡಿ.ಜಿ.ಪಿ.ಎಸ್ ಸರ್ವೆ ಕೈಗೊಳ್ಳಲಾಗುತ್ತಿದ್ದು, ಗುತ್ತಿಗೆ ಪ್ರದೇಶದ ಪ್ರಸ್ತುತ ಭೂಮಟ್ಟದ ಅಳತೆಗಳನ್ನು ಘನೀಕರಿಸಲಾಗುತ್ತಿದೆ.<br><br>➢ ಮಂಜೂರಾದ ಗಣಿ/ಕಲ್ಲುಗಣಿ ಗುತ್ತಿಗೆ ಪ್ರದೇಶಗಳನ್ನು ಹೊರತುಪಡಿಸಿ ಗುತ್ತಿಗೆ ಪ್ರದೇಶದ ಹೊರಭಾಗದಲ್ಲಿ ಒತ್ತುವರಿ ಮಾಡಿ ಗಣಿಗಾರಿಕೆಯನ್ನು ನಡೆಸುವುದನ್ನು ತಡೆಗಟ್ಟಲು Geo-fencing ಅಳವಡಿಸಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>➢ ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ಖನಿಜ ರಕ್ಷಣಾ ಪಡೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.<br><br>➢ ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು One State One GPS ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಖನಿಜ ಸಾಗಾಣಿಕಾ ವಾಹನಗಳು GPS ಅಳವಡಿಸಿಕೊಂಡು ಖನಿಜ ಸಾಗಾಣಿಕೆ ಪರವಾನಗಿಯೊಂದಿಗೆ ಸಾಗಾಣಿಕೆ ಮಾಡುವುದನ್ನು ಕಡ್ಡಾಯಗೊಳಿಸಿದೆ. |

➢ ಅದರಂತೆ, ಅಕ್ರಮ ಗಣಿಗಾರಿಕೆ ಸಂಬಂಧ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ಪತ್ತೆ ಹಚ್ಚಿ, ಅಕ್ರಮ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ:

**ಅನಧಿಕೃತ ಕಲ್ಲು ಗಣಿಗಾರಿಕೆ:-**

| ಕ್ರ. ಸಂ. | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ ಲಕ್ಷ ಗಳಲ್ಲಿ) | ದಾಖಲಿಸಿರುವ ಮೊಕದ್ದಮೆ ಗಳು |
|---|---|---|---|---|
| 1. | 2021-22 | 476 | 668.87 | 162 |
| 2. | 2022-23 | 607 | 728.98 | 192 |
| 3. | 2023-24 | 817 | 870.25 | 206 |
| ಒಟ್ಟು | | 1900 | 2268.10 | 560 |

ಸಂಖ್ಯೆ ಸಿಐ -ಎಂಎಂಎನ್/291/2024

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ-01

## 2023-24ನೇ ಸಾಲಿನಲ್ಲಿ ಜಿಲ್ಲಾವಾರು ಅಮಲ್ಜಾರಿ ಮಾಡಲಾದ ಉಪ ಖನಿಜ ಪರವಾನಿಗೆ/ಗುತ್ತಿಗೆಗಳ ವಿವರ

| ಕ್ರ. ಸಂ. | ಜಿಲ್ಲೆ | ನಿರ್ದಿಷ್ಟ ಉಪಖನಿಜ | | | | ನಿರ್ದಿಷ್ಟವಲ್ಲದ ಉಪಖನಿಜ | | | |
|---|---|---|---|---|---|---|---|---|---|
| | | ಸರ್ಕಾರಿ ಜಮೀನು | | ಪಟ್ಟಾ ಜಮೀನು | | ಸರ್ಕಾರಿ ಜಮೀನು | | ಪಟ್ಟಾ ಜಮೀನು | |
| | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| 1 | ರಾಮನಗರ | 13 | 21.17 | 7 | 21.16 | 0 | 0 | 0 | 0 |
| 2 | ಬೆಂಗಳೂರು (ಗ್ರಾ) | 1 | 0.35 | 1 | 3.12 | 1 | 3.00 | 1 | 2.00 |
| 3 | ಯಾದಗಿರಿ | 0 | 0 | 0 | 0 | 0 | 0 | 4 | 22.02 |
| 4 | ವಿಜಯಪುರ | 0 | 0 | 0 | 0 | 0 | 0 | 10 | 27.20 |
| 5 | ಉಡುಪಿ | 0 | 0 | 0 | 0 | 6 | 19.20 | 9 | 22.00 |
| 6 | ಉತ್ತರ ಕನ್ನಡ | 0 | 0 | 0 | 0 | 0 | 0 | 7 | 21.32 |
| 7 | ತುಮಕೂರು | 0 | 0 | 1 | 2.20 | 6 | 11.20 | 3 | 12.20 |
| 8 | ಕೋಲಾರ | 0 | 0 | 0 | 0 | 11 | 51.20 | 1 | 8.00 |
| 9 | ಕೊಪ್ಪಳ | 0 | 0 | 18 | 106.00 | 0 | 0 | 12 | 49.38 |
| 10 | ವಿಜಯನಗರ | 0 | 0 | 0 | 0 | 0 | 0 | 10 | 39.13 |
| 11 | ಮೈಸೂರು | 0 | 0 | 5 | 17.10 | 2 | 2.00 | 2 | 7.23 |
| 12 | ಧಾರವಾಡ | 0 | 0 | 0 | 0 | 0 | 0 | 9 | 24.34 |
| 13 | ಚಿಕ್ಕಬಳ್ಳಾಪುರ | 0 | 0 | 0 | 0 | 7 | 26.18 | 1 | 3.19 |
| 14 | ಹಾಸನ | 0 | 0 | 8 | 33.07 | 1 | 3.32 | 8 | 35.00 |
| 15 | ಬೆಳಗಾವಿ | 0 | 0 | 0 | 0 | 3 | 6.14 | 28 | 122.34 |
| 16 | ಚಿಕ್ಕಮಗಳೂರು | 0 | 0 | 0 | 0 | 11 | 27.27 | 2 | 6.20 |
| 17 | ಕೊಡಗು | 0 | 0 | 0 | 0 | 0 | 0 | 1 | 2.95 |
| 18 | ದಕ್ಷಿಣ ಕನ್ನಡ | 0 | 0 | 0 | 0 | 0 | 0 | 17 | 60.35 |
| 19 | ಮಂಡ್ಯ | 0 | 0 | 0 | 0 | 8 | 28.07 | 2 | 3.38 |
| 20 | ಬೆಂಗಳೂರು ನಗರ | 0 | 0 | 0 | 0 | 13 | 58.02 | 0 | 0 |
| 21 | ಶಿವಮೊಗ್ಗ | 0 | 0 | 0 | 0 | 6 | 32.00 | 0 | 0 |
| 22 | ರಾಯಚೂರು | 0 | 0 | 4 | 19.02 | 1 | 6.00 | 3 | 19.19 |
| 23 | ಗದಗ | 0 | 0 | 0 | 0 | 0 | 0 | 4 | 24.18 |
| 24 | ಚಿತ್ರದುರ್ಗ | 0 | 0 | 0 | 0 | 6 | 26.31 | 1 | 2.17 |
| 25 | ಹಾವೇರಿ | 0 | 0 | 0 | 0 | 0 | 0 | 4 | 11.36 |
| 26 | ದಾವಣಗೆರೆ | 0 | 0 | 0 | 0 | 0 | 0 | 22 | 60.19 |
| 27 | ಚಾಮರಾಜನಗರ | 0 | 0 | 9 | 47.04 | 6 | 12.20 | 24 | 78.16 |
| 28 | ಬಾಗಲಕೋಟೆ | 0 | 0 | 7 | 33.04 | 0 | 0 | 22 | 168.25 |
| 29 | ಬೀದರ್ | 0 | 0 | 0 | 0 | 0 | 0 | 3 | 6.27 |
| 30 | ಬಳ್ಳಾರಿ | 0 | 0 | 0 | 0 | 9 | 29.30 | 0 | 0 |
| 31 | ಕಲಬುರಗಿ | 0 | 0 | 0 | 0 | 0 | 0 | 13 | 65.35 |
| | ಒಟ್ಟು | 14 | 22.12 | 60 | 282.35 | 97 | 342.00 | 223 | 903.35 |

CI-MMN-291-2024

Deputy Director (Min. Admn)
Dept. of Mines & Geology
Bangalore-560001